# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 126 | Pages. 2 | Date: 19-03-2025, THURSDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 126 - ಪುಟಗಳು : 2 - 19 ಮಾರ್ಚ್ 2025 ಗುರುವಾರ | Ph: 8762954248 | ದರ : ₹1


# ಏರ್ ಪೋರ್ಟ್‌ಗೆ ಭೂಮಿ: ಎಕರೆಗೆ 1.50ಕೋಟಿ ರೂ.

## ಬೂವನಹಳ್ಳಿ ಭೂ ಸಂತ್ರಸ್ತರ ಸಮ್ಮತಿ | ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವ ದಾರಿ ಸುಗಮ

ಹಾಸನ: ಬೂವನಹಳ್ಳಿಯಲ್ಲಿ ನಡೆಯುತ್ತಿರುವ ವಿಮಾನ ನಿಲ್ದಾಣ ಕಾಮಗಾರಿಗೆ ಹೆಚ್ಚುವರಿ 16.9 ಎಕರೆ ಭೂಮಿ ಸ್ವಾಧೀನಕ್ಕೆ ಸಂಬಂಧಿಸಿ ಪ್ರತಿ ಎಕರೆಗೆ 1.50 ಕೋಟಿ ರೂ. ಪರಿಹಾರ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವಿಶೇಷ ಜಿಲ್ಲಾಧಿಕಾರಿ ದಯಾನಂದ ಭಂಡಾರಿ ಹೇಳಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಭೂ ದರ ನಿಗದಿ ಸಲಹಾ ಸಮಿತಿ ಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿ ಮಾತನಾಡಿದರು.

ಭೂಮಿ ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ ಎಕರೆಗೆ ಎಸ್‌ಆರ್ ದರ 33 ಲಕ್ಷ ರೂ. ಇತ್ತು. ಎರಡು ಪಟ್ಟು ಪರಿಹಾರ ನೀಡುವುದಾದರೂ 66 ಲಕ್ಷ ರೂ.ಗೆ ಪ್ರಸ್ತಾವನೆ ಸಲ್ಲಿಸುತ್ತೇವೆ ಎಂದರು. ಅದಕ್ಕೆ ರೈತರು ವಿರೋಧ ವ್ಯಕ್ತಪಡಿಸಿದಾಗ ಭೂ ಸ್ವಾಧೀನ ಪ್ರಕ್ರಿಯೆ ಕಾಯ್ದೆ ಪ್ರಕಾರ ಗ್ರಾಮೀಣ ಭಾಗದ ಜಮೀನಿಗೆ ನಾಲ್ಕು ಪಟ್ಟು ಅಧಿಕ ಪರಿಹಾರ ನೀಡುವುದಾದರೆ ಎಕರೆಗೆ 1.32 ಕೋಟಿ ರೂ. ಕಲ್ಪಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಬಹುದು ಎಂದರು. ಅದಕ್ಕೂ ರೈತರು ಸಹಮತ ಸೂಚಿಸದ ಹಿನ್ನಲೆಯಲ್ಲಿ 1.50 ಕೋಟಿ ರೂ. ನೀಡುವಂತೆ ಪ್ರಸ್ತಾವನೆ ಸಲ್ಲಿಸಬಹುದು. ಇದಕ್ಕಿಂತ ಹೆಚ್ಚಿನ ನೀರಿಕ್ಷೆ ಮಾಡಬೇಡಿ. ಪರಿಹಾರ ಹೆಚ್ಚಳಕ್ಕಾಗಿ ಕೋರ್ಟ್ ಮೆಟ್ಟಿಲೇರಿದರೂ ಪ್ರಯೋಜನವಾಗುವುದಿಲ್ಲ ಎಂದರು. ಆಗ ರೈತರು ಕನಿಷ್ಠ 1.75 ಕೋಟಿ ರೂ. ಅಂತಿಮಗೊಳಿಸಿ ಎಂದಾಗ, ವಿಶೇಷ ಜಿಲ್ಲಾಧಿಕಾರಿ ಅವರು ಪ್ರಸ್ತಾವನೆಯಲ್ಲಿ ಈ ಬೇಡಿಕೆ ಸೇರಿಸಲಾಗುವುದು ಎಂದರು. ಅದಕ್ಕೆ ರೈತರು ಸಮ್ಮತಿ ಸೂಚಿಸಿದರು.



### ವಿಳಂಬಕ್ಕೆ ಕಾರಣ ಯಾರು..?

ಕೆಐಎಡಿಬಿ ವಿಶೇಷ ಭೂಸ್ವಾಧಿನಾಧಿಕಾರಿ ವೆಂಕಟರಾಜು ಮಾತನಾಡಿ, 1965ರಲ್ಲಿ ಚಿಗುರೊಡೆದ ಹಾಸನ ವಿಮಾನ ನಿಲ್ದಾಣ ಕನಸು 60 ವರ್ಷವಾದರೂ ಕುಂಟುತ್ತಾ ಸಾಗಲು ಕಾರಣ ಯಾರು ಎಂಬುದನ್ನು ರೈತರು ಅರ್ಥಮಾಡಿಕೊಳ್ಳಬೇಕು. 1965ರಿಂದ 2005ರ ವರೆಗೆ ವಿಮಾನ ನಿಲ್ದಾಣದ ಬಗ್ಗೆ ಗಂಭೀರ ಕೆಲಸಗಳಾಗಲಿಲ್ಲ. ಈಗ ಹಾಸನಕ್ಕೆ ವಿಮಾನ ನಿಲ್ದಾಣ ಮಾಡಲೇಬೇಕೆನ್ನುವುದು ಎಲ್ಲರ ಇಂಗಿತವಾಗಿದ್ದು ಭೂ ಮಾಲೀಕರು ಸಹಕರಿಸಬೇಕು. ನಾನು ರೈತನ ಮಗ. ಅನ್ನದಾತರ ನೋವು ಅರ್ಥವಾಗುತ್ತದೆ ಎಂದು ಭೂ ಮಾಲೀಕರ ಮನವೊಲಿಸುವಲ್ಲಿ ಯಶಸ್ವಿಯಾದರು.

> ಹಾಸನದಲ್ಲಿ ವಿಮಾನ ಹಾರಾಡಬೇಕು ಎನ್ನುವುದು ಎಲ್ಲರ ಬಯಕೆ. ಅದಕ್ಕೆ ರೈತರ ಸಹಕಾರ ಅಗತ್ಯವಾಗಿದೆ. ಭೂ ಪರಿಹಾರ ನೀಡುವಲ್ಲಿ ರೈತರಿಗೆ ಅನ್ಯಾಯ ಮಾಡುವುದಿಲ್ಲ. ಆದರೆ ಪರಿಸ್ಥಿತಿಯನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು
>
> **- ದಯಾನಂದ ಭಂಡಾರಿ**
> ಕೆಐಎಡಿಬಿ ವಿಶೇಷ ಜಿಲ್ಲಾ ಅಧಿಕಾರಿ

### ಪರಿಹಾರ ಹೆಚ್ಚಳಕ್ಕೆ ಆಗ್ರಹ

ಭೂಸಂತ್ರಸ್ತ ತುಳಸಿರಾಮ್ ಮಾತನಾಡಿ, ವಿಮಾನ ನಿಲ್ದಾಣ ಸುತ್ತಲಿನ ಭೂಮಿಗೆ ಬಂಗಾರದ ಬೆಲೆ ಬಂದಿದೆ. ಸುತ್ತಲು ಲೇಔಟ್‌ಗಳಾಗಿ ದರ ಗಗನಕ್ಕೇರಿದೆ. ಭೂಮಿಗೆ ಪರ್ಯಾಯ ವಸ್ತು ಇಲ್ಲವೇ ಇಲ್ಲ. ಆದ್ದರಿಂದ ಪ್ರತಿ ಎಕರೆಗೆ 6 ಕೋಟಿ ರೂ. ನಿಗದಿಪಡಿಸಬೇಕು. ಭೂಮಿ ಕಳೆದುಕೊಳ್ಳುವ ಕುಟುಂಬದ ಒಬ್ಬರಿಗೆ ಉದ್ಯೋಗ ಕಲ್ಪಿಸಬೇಕು. ಎಲ್ಲರಿಗೂ ನಿರಾಶ್ರಿತರ ಪ್ರಮಾಣ ಪತ್ರ ನೀಡಬೇಕು. ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ವಿಮಾನ ನಿಲ್ದಾಣಕ್ಕೆ ಭೂಮಿ ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ ಅದು ಗ್ರಾಮೀಣ ಪ್ರದೇಶಕ್ಕೆ ಸೇರಿತ್ತು. ಭೂ ಸ್ವಾಧೀನ ಕಾಯ್ದೆ ಪ್ರಕಾರ ಗ್ರಾಮೀಣ ಭಾಗದ ಜಮೀನಿಗೆ ಎಸ್‌ಆರ್ ದರಕ್ಕಿಂತ 4 ಪಟ್ಟು ಹಾಗು ನಗರ ವ್ಯಾಪ್ತಿಯಲ್ಲಿದ್ದರೆ 2 ಪಟ್ಟು ಅಧಿಕ ಪರಿಹಾರ ನೀಡಬೇಕು. ಕೆಐಡಿಬಿ ಅಧಿಕಾರಿಗಳು ಕೆಲವರಿಗೆ ಈಗಾಗಲೇ ಪರಿಹಾರ ನೀಡಿದ್ದೇವೆ ಎಂಬ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಯಾರಿಗೆ ಯಾವ ರೂಪದಲ್ಲಿ ಪರಿಹಾರ ನೀಡಲಾಗಿದೆ ಎಂಬುದರ ಕುರಿತು ಮಾಹಿತಿ ನೀಡಬೇಕು. ಹುಡಾ ಭೂಮಿ ಖರೀದಿಸಿ ಲೇಔಟ್‌ಗಳ ನಿರ್ಮಿಸುತ್ತಿದ್ದು ಎಕರೆಗೆ ಎಷ್ಟು ದರ ನಿಗದಿಪಡಿಸಿದೆ ಎಂಬುದನ್ನು ಪರಿಶೀಲಿಸಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮತ್ತೊಬ್ಬ ಸಂತ್ರಸ್ತ ಬಾಲರಾಜ್ ಮಾತನಾಡಿ, ಸ್ವಾಧೀನಪಡಿಸಿಕೊಂಡದ್ದಕ್ಕಿಂತ ಹೆಚ್ಚುವರಿ ಜಾಗ ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಿಸುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು ಎಂದರು.

ಜಮೀನು ದರ ನಿಗದಿ ವಿಚಾರವಾಗಿ ರೈತರೆಲ್ಲರೂ ಒಮ್ಮತದಿಂದ ಚರ್ಚಿಸಿ ನಿರ್ಧಾರಕ್ಕೆ ಬನ್ನಿ ಎಂದು ವಿಶೇಷ ಜಿಲ್ಲಾಧಿಕಾರಿ ದಯಾನಂದ ಭಂಡಾರಿ ಸಮಯ ನೀಡಿದರು. ಆಗ ರೈತರೆಲ್ಲರೂ ಒಮ್ಮತದಿಂದ ಎಕರೆಗೆ 6 ಕೋಟಿ ರೂ. ಸರ್ಕಾರಕ್ಕೆ ಹೊರೆಯಾಗುವುದಾದರೆ 3 ಕೋಟಿ ರೂ. ಕೊಡಬೇಕು ಎಂದು ಮನವಿ ಸಲ್ಲಿಸಿದರು.

ತಹಶೀಲ್ದಾರ್ ಶ್ವೇತಾ ರವೀಂದ್ರ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಪಿ. ರಮೇಶ್‌ಕುಮಾರ್ ಹಾಗು ಭೂಸ್ವಾಧೀನ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

## ಆಪರೇಷನ್ ವಿಕ್ರಾಂತ್ ವಿಫಲ



ಬೇಲೂರು: ಮಲೆನಾಡು ಭಾಗದಲ್ಲಿ ತೀವ್ರ ಉಪಟಳ ನೀಡುತ್ತಿರುವ ಕಾಡಾನೆ ಸೆರೆ ಕಾರ್ಯಾಚರಣೆಯನ್ನು ಅರಣ್ಯ ಇಲಾಖೆ ಕೈಗೊಂಡಿದೆಯಾದರೂ ವಿಕ್ರಾಂತ್ ಹೆಸರಿನ ಸಲಗ ಸೆರೆಗೆ ಕೈಗೊಂಡಿದ್ದ ಕಾರ್ಯಾಚರಣೆ ಮಂಗಳವಾರ ವಿಫಲವಾಗಿದೆ.

ಮೂರು ಆನೆಗಳ ಸೆರೆ ಹಿಡಿಯಲು ಅರಣ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದ್ದು, ದುಬಾರೆ ಹಾಗು ಮತ್ತಿಗೋಡೆ ಆನೆ ಕ್ಯಾಂಪ್‌ನಿಂದ ಏಳು ಕುಮ್ಕಿ ಆನೆಗಳು ಬಂದಿವೆ. ಭಾನುವಾರ ತಾಲ್ಲೂಕಿನ ಹಳ್ಳಿಗದ್ದೆಯ ಕಾಫಿ ಎಸ್ಟೇಟ್‌ನಲ್ಲಿ 18 ರಿಂದ 20 ವರ್ಷದ ಗಂಡಾನೆಯನ್ನು ಸೆರೆ ಹಿಡಿಯಲಾಗಿದೆ. ಮಂಗಳವಾರ ಸಹ ಕಾರ್ಯಾಚರಣೆ ಆರಂಭಿಸಲಾಯಿತಾದರೂ ಯಶ ಕಾಣಲಿಲ್ಲ.

ಮಂಗಳವಾರ ಬೆಳಿಗ್ಗೆಯೇ ಅರಣ್ಯ ಇಲಾಖೆಯ ಇಟಿಎಫ್ ಸಿಬ್ಬಂದಿ ವಿಕ್ರಾಂತ್‌ನ ಲೋಕೇಶನ್ ಗುರುತು ಪತ್ತೆ ಮಾಡಿತು. ಬೆಳಿಗ್ಗೆ 10 ಗಂಟೆಗೆ ಏಳು ಸಾಕಾನೆಗಳೊಂದಿಗೆ ವೈದ್ಯರು ಅರವಳಿಕೆ ಚುಚ್ಚುಮದ್ದು ನೀಡಲು ಅರಣ್ಯದೊಳಗೆ ಪ್ರವೇಶ ಮಾಡಿದರು. ಕಾಡಿನಲ್ಲಿ ಹೆಚ್ಚು ಮುಳ್ಳು ಬೆಳೆದಿದ್ದು ಅದನ್ನು ಲೆಕ್ಕಿಸದೆ ವಿಕ್ರಾಂತ್‌ಗೆ ಅರವಳಿಕೆ ಚುಚ್ಚುಮದ್ದು ನೀಡಲು ಶತಾಯಗತಾಯ ಪ್ರಯತ್ನಪಟ್ಟರು. ಆದರೆ ವಿಕ್ರಾಂತ್ ಮೂವತ್ತು ಕಾಡಾನೆಗಳಿದ್ದ ಗುಂಪಿನೊಳಗೆ ಸೇರಿಕೊಂಡಿತು. ಅರಣ್ಯ ಇಲಾಖೆ ಸಿಬ್ಬಂದಿ ವಿಕ್ರಾಂತ್‌ನನ್ನು ಗುಂಪಿನಿಂದ ಬೇರ್ಪಡಿಸಲು ಹರಸಾಹಸಪಟ್ಟರು ಸಾಧ್ಯವಾಗಲಿಲ್ಲ. ಸತತ ಆರು ಗಂಟೆ ಕಳೆದರು ವಿಕ್ರಾಂತ್‌ಗೆ ಅರವಳಿಕೆ ಚುಚ್ಚುಮದ್ದು ಸಾಧ್ಯವಾಗದಿದ್ದಾಗ ಕಾರ್ಯಾಚರಣೆ ಸ್ಥಗಿತಗೊಳಿಸಲಾಯಿತು.

## ತರಕಾರಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿ: ಪ್ರತಿಭಟನೆ

ಹಾಸನ: ತರಕಾರಿ ಪದಾರ್ಥಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು ಎಂದು ಆಗ್ರಹಿಸಿ ಮಂಗಳವಾರ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರು ಜಿಲ್ಲಾಧಿಕಾರಿ ಕಚೇರಿ ಎದುರು ತರಕಾರಿ ಬುಟ್ಟಿ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಟೊಮ್ಯಾಟೊ, ಸೋರೆಕಾರಿ, ಮೆಣಸಿನಕಾಯಿ, ತೊಂಡೆಕಾಯಿ ಸೇರಿದಂತೆ ಎಲ್ಲಾ ಪದಾರ್ಥಗಳಿಗೆ ಬೆಲೆ ಇಲ್ಲದೆ ನಷ್ಟ ಅನುಭವಿಸುವಂತಾಗಿದೆ ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಎದುರು ಕಣ್ಣೀರು ಹಾಕಿದರು.

ಹೇಮಾವತಿ ಪ್ರತಿಮೆಯಿಂದ ತಲೆ ಮೇಲೆ ತರಕಾರಿ ಬುಟ್ಟಿಗಳನ್ನು ಹೊತ್ತು



ಮೆರವಣಿಗೆಯಲ್ಲಿ ಬಂದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಮಾತನಾಡಿ, ಹಾಸನ ಜಿಲ್ಲೆಯಲ್ಲಿ ರೈತರು ಸಂಕಷ್ಟದಲ್ಲಿ ತರಕಾರಿ ಬೆಳೆ ಬೆಳೆಯುತ್ತಿದ್ದಾರೆ. ರೈತರು ಬೆಳೆದ ತರಕಾರಿಗಳಿಗೆ ನಿಗದಿತ ಬೆಲೆ ಮತ್ತು ಮಾರುಕಟ್ಟೆ ಶೀತಲೀಕರಣದ ವ್ಯವಸ್ಥೆ ಇಲ್ಲದೆ ಮತ್ತು ವ್ಯವಸ್ಥಿತವಾಗಿ ಮಾರುಕಟ್ಟೆ ಇಲ್ಲದೆ ಹಾಕಿದ ಬಂಡವಾಳವೂ ರೈತರಿಗೆ ಸಿಗುತ್ತಿಲ್ಲ ಎಂದರು. ಆದ್ದರಿಂದ ರೈತರಿಗೆ ನೇರವಾಗಿ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಸ್ಥಳಾವಕಾಶ ಕಲ್ಪಿಸಿ ಕೊಡಬೇಕು ಹಾಗೂ ಶೀತಲೀಕರಣದ ವ್ಯವಸ್ಥೆ ಮಾಡಿಸಿ ಕೊಡಬೇಕು ಎಂದು ಆಗ್ರಹಿಸಿದರು. ಎಪಿಎಂಸಿ ಯಲ್ಲಿ ದಲ್ಲಾಳಿಗಳ ಹಾವಳಿ ತಪ್ಪಿಸಲು ಕ್ರಮ ಕೈಗೊಳ್ಳಬೇಕು ಮತ್ತು ರೈತರ ಕಟ್ಟೆ ಹತ್ತಿರ ದಲ್ಲಾಳಿಗಳ ನಾಮ ಫಲಕ ತೆಗೆಸಬೇಕು, ರೈತರಿಂದ ತೆಗೆದುಕೊಳ್ಳುವ ಕಮಿಷನ್ ರದ್ದಾಗಬೇಕು ಮತ್ತು ತರಕಾರಿ ದರವನ್ನು ಅಧಿಕಾರಿಗಳು ಮತ್ತು ರೈತರ ಸಮ್ಮುಖದಲ್ಲಿ ನಿಗದಿಪಡಿಸಬೇಕು, ತರಕಾರಿ ಕಟ್ಟೆ ಆವರಣದಲ್ಲಿ ಸಹಾಯವಾಣಿ ತೆರೆದು ರೈತರಿಗೆ ತೊಂದರೆ ಆದರೆ ಯಾವುದೇ ಸಂದರ್ಭದಲ್ಲಿ ತಕ್ಷಣವೇ ಅಧಿಕಾರಿಗಳು ರೈತರ ನೆರವಿಗೆ ಬರಬೇಕು ಎಂದು ಒತ್ತಾಯಿಸಿದರು.

ರೈತರ ಮನವಿ ಆಲಿಸಿದ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು, ಕೂಡಲೇ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ ಹಾಗೂ ಎಪಿಎಂಸಿ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಮಂಜು, ಮಲ್ಲೇಶ್, ಪ್ರಕಾಶ್, ತೇಜೂರು ಆನಂದ, ಯತೀಶ್ ಮತ್ತಿತರರು ಪಾಲ್ಗೊಂಡಿದ್ದರು.

## ನಿಷೇಧಿತ ಜಾಗದಲ್ಲಿ ಗಣಿಗಾರಿಕೆ: ಲಾರಿ ವಶಕ್ಕೆ

ಹಳೇಬೀಡು: ಇಲ್ಲಿನ ನಗರೇಶ್ವರ ದೇವಾಲಯ ಸುತ್ತಲಿನ ನಿಷೇಧಿತ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿ ಅಕ್ರಮವಾಗಿ ಸಾಗಿಸುತ್ತಿದ್ದ ಕಲ್ಲುಗಳನ್ನು ಲಾರಿ ಸಮೇತ ಪೊಲೀಸರು ಮಂಗಳವಾರ ವಶಪಡಿಸಿಕೊಂಡಿದ್ದಾರೆ.

ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಸೇರಿದ ಸ್ಮಾರಕದ ಬಳಿ ಗಣಿಗಾರಿಕೆ ಮಾಡುವಂತಿಲ್ಲ ಎಂಬ ನಿಯಮವಿದ್ದರೂ ಮೂರು ದಿನದಿಂದ ರಾತ್ರೋ ರಾತ್ರಿ ಗಣಿಗಾರಿಕೆ ನಡೆಯುತ್ತಿತ್ತು. ಸಮೀಪದ ಬಸ್ತಿಹಳ್ಳಿಯ ಯುವಕರು ಪೊಲೀಸ್ ತುರ್ತು ಸೇವೆಗೆ ಕರೆ ಮಾಡಿದ್ದರಿಂದ ಹಳೇಬೀಡು ಪೊಲೀಸರು ಬಂಡೆ ಸಾಗಿಸುತ್ತಿದ್ದ ಲಾರಿ ವಶಪಡಿಸಿಕೊಂಡಿದ್ದಾರೆ. ವಾಹನವನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರಿಸಲಾಗಿ



ದೆ. ಗಣಿಗಾರಿಕೆ ನಡೆಸಲು ಅನುಮತಿ ಪಡೆದಿದ್ದಾರೆಯೇ, ಇಲ್ಲವೆ ಎಂಬುದನ್ನು ಇಲಾಖೆ ಪರಿಶೀಲನೆ ನಡೆಸಲಾಗುವುದು. ರಾಜಧನ ಪಾವತಿಸದೆ ಗಣಿಗಾರಿಕೆ ನಡೆಸಿದ್ದರೆ ಗಣಿ ಭೂ ವಿಜ್ಞಾನ ಇಲಾಖೆಯವರು ಮುಂದಿನ ಕ್ರಮ ಕೈಗೊಳ್ಳುತ್ತಾರೆ ಎಂದು ಸಬ್ ಇನ್ಸಪೆಕ್ಟರ್ ಸಿದ್ದಲಿಂಗ ಬಾನಸೆ ತಿಳಿಸಿದರು.

ಪುರಾತತ್ವ ಇಲಾಖೆಯ ಸ್ಮಾರಕಗಳ ಸುತ್ತ ಗಣಿಗಾರಿಕೆ ನಡೆಸುವಂತಿಲ್ಲ ಎಂಬ ನಿಯಮ ಇದ್ದರೂ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದರು. ಹೊಯ್ಸಳೇಶ್ವರ ದೇವಾಲಯ, ಜೈನ ಬಸದಿ, ನಗರೇಶ್ವರ ಸ್ಮಾರಕಗಳ ಸುತ್ತ 100 ಮೀಟರ್ ಅಂತರದಲ್ಲಿ ಕಟ್ಟಡ ನಿರ್ಮಾಣಕ್ಕೆ ಪುರಾತತ್ವ ಇಲಾಖೆ ಅವಕಾಶ ಕೊಡುತ್ತಿಲ್ಲ. ಶಿಥಿಲವಾದ ಮನೆಗಳನ್ನು ದುರಸ್ತಿ ಮಾಡಿಕೊಂಡು ವಾಸ ಮಾಡುವುದಕ್ಕೂ ಇಲಾಖೆ ಸಿಬ್ಬಂದಿ ಅಡ್ಡಿಪಡಿಸುತ್ತಾರೆ. ಮೂರು ದಿನದಿಂದ ರಾತ್ರಿ ವೇಳೆ ಗಣಿಗಾರಿಕೆ ಮಾಡುತ್ತಿದ್ದರೂ, ಇಲಾಖೆಯವರು ಗಮನ ಹರಿಸಿಲ್ಲ ಎಂಬುದು ಅನುಮಾನಕ್ಕೆ ಅವಕಾಶವಾಗಿದೆ ಎಂದು ಬಸ್ತಿಹಳ್ಳಿ ಗ್ರಾಮದ ಮದನ್, ವಿಜಯ್ ಕುಮಾರ್, ಹರೀಶ, ಈಶ್ವರಪ್ಪ ಆರೋಪಿಸಿದ್ದಾರೆ.

ನಗರೇಶ್ವರ ಉತ್ಖನನ ಸಂಕೀರ್ಣದ ಬಳಿ ಗಣಿಗಾರಿಕೆ ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಗಣಿಗಾರಿಕೆ ನಡೆಯುತ್ತಿದ್ದ ನಿವೇಶನದ ಮಾಲೀಕರಾದ ಗಿರೀಜಮ್ಮ ಅವರಿಗೆ ನೋಟೀಸ್ ಜಾರಿ ಮಾಡಲಾಗಿದೆ. ಪುನಃ ಗಣಿಗಾರಿಕೆ ಆರಂಭಿಸಿದರೆ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ ಎಂದು ಸಹಾಯಕ ಸ್ಮಾರಕ ಸಂರಕ್ಷಣಾಧಿಕಾರಿ ಗೌತಮ್ ತಿಳಿಸಿದರು.

## ವೈಭವದ ಕಬ್ಬಳಿ ಬಸವೇಶ್ವರ ಸ್ವಾಮಿ ರಥೋತ್ಸವ

ಚನ್ನರಾಯಪಟ್ಟಣ: ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀ ಕ್ಷೇತ್ರ ಕಬ್ಬಳಿ ಗ್ರಾಮದಲ್ಲಿ ಬಸವೇಶ್ವರ ಸ್ವಾಮಿಯ ರಥೋತ್ಸವ ಸೋಮವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ರಥೋತ್ಸವ ಅಂಗವಾಗಿ ಬೆಳಿಗ್ಗೆಯಿಂದಲೇ ಶ್ರೀ ಬಸವೇಶ್ವರಸ್ವಾಮಿ ಸನ್ನಿಧಿಯಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ಗಂಗಾಪೂಜೆ ಹಾಗೂ ವಿಘ್ನೇಶ್ವರ ಪೂಜೆ, ದೇಗುಲಕ್ಕೆ ಹೂವಿನ ಚಪ್ಪರ ಹಾಕಿ ತಳಿರು-ತೋರಣಗಳಿಂದ ಸಿಂಗರಿಸಲಾಗಿತ್ತು.

ಕಬ್ಬಳಿ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಶ್ರೀ ಬಸವೇಶ್ವರ ಸ್ವಾಮಿಗೆ ಬೆಳಿಗ್ಗೆ 7.30ರ ವೇಳೆಗೆ ಕುಂಕುಮಾರ್ಚಣೆ, ಅಭಿಷೇಕ,



ಪುಷ್ಪಾರ್ಚನೆ ಬಳಿಕ ವಿಶೇಷ ಪೂಜೆ ನಡೆಯಿತು.

ಸಂಜೆ 7.30ಕ್ಕೆ ಆದಿಚುಂಚನಗಿರಿ ಹಾಸನ ಶಾಖಾಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಗ್ರಾಮಕ್ಕೆ ಆಗಮಿಸಿದಾಗ ಗ್ರಾಮಸ್ಥರು ಪಾದಪೂಜೆ ಸಲ್ಲಿಸಿ ಸ್ವಾಗತಿಸಿದರು. ಬಳಿಕ ರಥದಲ್ಲಿ ಅಲಂಕೃತನಾಗಿದ್ದ ಬಸವೇಶ್ವರಸ್ವಾಮಿಗೆ ಪ್ರಥಮ ಪೂಜೆ ಸಲ್ಲಿಸುವ ಮೂಲಕ ವೈಭವದ ರಥೋತ್ಸವಕ್ಕೆ ಚಾಲನೆ ನೀಡಿದರು.

ಸಂಪ್ರದಾಯದಂತೆ ಗ್ರಾಮದ ಹಿರಿಯರೊಬ್ಬರು ರಥದ ಎದುರಿನಲ್ಲಿ ನೆಡಲಾಗಿದ್ದ ಬಾಳೆಕಂದನ್ನು ವೀರಕತ್ತಿಯಿಂದ ಕತ್ತರಿಸುತ್ತಿದಂತೆಯೇ ಭಕ್ತರು ಜೈಂಕಾರದೊಂದಿಗೆ ರಾಜಬೀದಿಯಲ್ಲಿ ರಥ ಎಳೆದರು. ನೆರೆದಿದ್ದ ಭಕ್ತರು ರಥದ ಮೇಲೆ ಬಾಳೆಹಣ್ಣು, ಹೂ, ಬಿಲ್ವಪತ್ರೆ ಹಾಗೂ ದವನ ಎಸೆದು ಭಕ್ತಿ ಭಾವದಲ್ಲಿ ತೇಲಿದರು.

ಗ್ರಾಮದ ರಾಜ ಬೀದಿಯಲ್ಲಿ ರಥೋತ್ಸವ ಮುಗಿದ ಬಳಿಕ ಭಕ್ತರು ರಥದ ಎರಡು ಕಡೆಯಲ್ಲಿರುವ ನಾಲ್ಕು ಕಲ್ಲಿನ ಚಕ್ರಗಳಿಗೆ ಈಡುಗಾಯಿ ಒಡೆಯುವ ಮೂಲಕ ಹರಕೆ ತೀರಿಸಿದರು. ರಾತ್ರಿ 8.15 ರಿಂದ 9.45ರ ವರೆಗೆ ಸುಮಾರು 6 ಸಾವಿರಕ್ಕೂ ಹೆಚ್ಚು ಈಡುಗಾಯಿ ಒಡೆದು ಸಂಭ್ರಮಿಸಿದರು.

ತಿಪಟೂರು, ನಾಗಮಂಗಲ, ತುರುವೇಕೆರೆ, ಅರಸೀಕೆರೆ ಸೇರಿದಂತೆ ಜಿಲ್ಲೆಯ ವಿವಿಧೆಡೆಯಿಂದ ಸುಮಾರು 3 ರಿಂದ 4 ಸಾವಿರಕ್ಕೂ ಹೆಚ್ಚಿನ ಭಕ್ತರು ಆಗಮಿಸಿದ್ದರು.

## ರೈಲ್ವೆ ಕಾಮಗಾರಿಗೆ ವೇಗ ನೀಡಲು ಎಂ.ಪಿ. ಮನವಿ



ಹಾಸನ: ಜಿಲ್ಲೆಯ ರೈಲ್ವೆ ಯೋಜನೆ ಕಾಮಗಾರಿಗೆ ವೇಗ ನೀಡಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಮಂಗಳವಾರ ಸಂಸತ್ ಅಧಿವೇಶನದಲ್ಲಿ ಮಂಗಳವಾರ ಕೇಂದ್ರ ಸರ್ಕಾರದ ಗಮನ ಸೆಳೆದರು.

ತಿಪಟೂರು-ದುದ್ದ ಬ್ರಾಡ್ ಗೇಜ್ ರೈಲ್ವೆ ಹಳಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಈ ರೈಲ್ವೆ ಮಾರ್ಗ ಬೆಂಗಳೂರು-ಮಂಗಳೂರು ಮಾರ್ಗಕ್ಕೆ ಪರ್ಯಾಯ ವ್ಯವಸ್ಥೆಯನ್ನು ಒದಗಿಸಲಿದೆ. 21 ಕಿ.ಮೀ. ಅಂತರವನ್ನು ಕಡಿಮೆಗೊಳಿಸಲಿದೆ. ಕಾಮಗಾರಿ ತ್ವರಿತಗೊಳಿಸುವಂತೆ ಕೇಂದ್ರ ಸರ್ಕಾರ ಹಾಗು ರೈಲ್ವೆ ಸಚಿವರಲ್ಲಿ ಮನವಿ ಮಾಡಿದರು.

ಅರಸೀಕೆರೆಯಿಂದ ಹೊಳೆನರಸೀಪುರ ಮಾರ್ಗವಾಗಿ ಮೈಸೂರಿಗೆ ಪ್ರತಿದಿನವೂ ಡೆಮೊ ರೈಲು ಸಂಚಾರ ಆರಂಭಿಸುವಂತೆ ಮನವಿ ಮಾಡಿದ ಅವರು, ಇದರಿಂದ ಹೆಚ್ಚುವರಿ ರೈಲು ಲಭ್ಯವಾಗಿ, ದೈನಂದಿನ ಪ್ರಯಾಣಿಕರಿಗೆ ಸಹಾಯವಾಗಲಿದೆ. ಸಾರ್ವಜನಿಕರ ಬಹುಮುಖ್ಯ ಬೇಡಿಕೆಯಾದ ಹಾಸನ-ತಿರುಪತಿ ಮತ್ತು ಬೀರೂರು-ತಿರುಪತಿ ರೈಲು ಸೇವೆ ಆರಂಭಿಸುವಂತೆ ಕೋರಿದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಶಿಕ್ಷಣ ಇಲಾಖೆ ಸಿದ್ಧ

### ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕಾರ್ಯಾಗಾರ | ಲೋಪ ತಡೆಗೆ ಸೂಚನೆ

ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಮಾ. 21 ರಿಂದ ಏ. 4ರ ವರೆಗೆ ಜಿಲ್ಲಾದ್ಯಂತ 77 ಕೇಂದ್ರಗಳಲ್ಲಿ ನಡೆಯುತ್ತಿದ್ದು, ಯಾವುದೇ ಲೋಪಗಳಾಗದಂತೆ ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಸೂಚಿಸಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ




ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ ಹಾಗೂ ಪಶ್ನೆ ಪತ್ರಿಕೆ ಪಾಲಕರಿಗೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಪರೀಕ್ಷಾ ಸಂದರ್ಭದಲ್ಲಿ ಯಾವುದೇ ರೀತಿಯ ಅಕ್ರಮ, ಅವಘಡ ಸಂಭವಿಸದಂತೆ ನಿಗಾವಹಿಸುವುದರ ಜೊತೆಗೆ ಪ್ರಾಮಾಣಿಕವಾಗಿ ಪರೀಕ್ಷೆ ನಡೆಸುವ ಮೂಲಕ ಜಿಲ್ಲೆಗೆ ಉತ್ತಮ ಫಲಿತಾಂಶ ತರುವಲ್ಲಿ ಯಶಸ್ವಿಯಾಗಿ ಎಂದು ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ ಹಾಗೂ ಪಶ್ನೆ ಪತ್ರಿಕೆ ಪಾಲಕರಿಗೆ ಹೇಳಿದರು.

ಜಿಲ್ಲೆಯಲ್ಲಿ ಪೂರ್ವಭಾವಿ ಪರೀಕ್ಷೆಯಲ್ಲಿ ಮಕ್ಕಳು ಶೇ.90 ರಷ್ಟು ಉತ್ತಮ ಫಲಿತಾಂಶ ಪಡೆದಿದ್ದಾರೆ. ಮುಖ್ಯ ಪರೀಕ್ಷೆಯಲ್ಲಿಯೂ ಮೂರನೇ ಸ್ಥಾನದೊಳಗೆ ಬರುತ್ತೇವೆ ಎಂಬ ಭರವಸೆಯಿದೆ.

ಹಿಂದಿನ ವರ್ಷಕ್ಕಿಂತಲೂ ಈ ಬಾರಿ ಶಿಕ್ಷಕರು ಹೆಚ್ಚು ಪರಿಶ್ರಮ ಹಾಕಿದ್ದೀರಿ, ಖಂಡಿತ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ ಎಂದರಲ್ಲದೆ, ಹೆಚ್ಚಿನ ಶ್ರಮ ಹಾಕಿ ಮಕ್ಕಳ ಏಳಿಗಾಗಿ ಶ್ರಮಿಸಿರುವ ಶಿಕ್ಷಕರನ್ನು ಗುರುತಿಸಿ ಗೌರವಿಸುವ ಕೆಲಸ ಮಾಡಲಾಗುವುದು ಎಂದರು.

## ಧಾವಂತದ ಚಾಲನೆ ಭೀಕರ ಅಪಘಾತ



ಆಲೂರು: ತಾಲ್ಲೂಕಿನ ಪಾಳ್ಯ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಸಂಜೆ ಕಾರುಗಳ ನಡುವೆ ಅಪಘಾತ ಸಂಭವಿಸಿ ಐವರು ಗಂಭೀರ ಗಾಯಗೊಂಡಿದ್ದಾರೆ.

ಬೆಂಗಳೂರಿನಿಂದ ಮಂಗಳೂರು ಕಡೆಗೆ ತೆರಳುತ್ತಿದ್ದ ಕಾರನ್ನು ಹಿಂದಿನಿಂದ ಬಂದ ಮತ್ತೊಂದು ಕಾರಿನ ಚಾಲಕ ಓವರ್ ಟೇಕ್ ಮಾಡಲು ಯತ್ನಿಸಿದ್ದು ಅಪಘಾತ ಸಂಭವಿಸಿದೆ. ಡಿಕ್ಕಿಯ ರಭಸಕ್ಕೆ ಕಾರುಗಳು ಪಲ್ಟಿಯಾಗಿವೆ. ಗಾಯಾಳುಗಳನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಲೂರು ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

# ಪ್ರತ್ಯೇಕ ಸಭೆಯಿಂದ ಕಾಂಗ್ರೆಸ್ ಗೊಂದಲ ಬಹಿರಂಗ



ಅರಕಲಗೂಡು: ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ ಮತ್ತು ಅರಕಲಗೂಡು ವಿಧಾನಸಭಾ ಉಸ್ತುವಾರಿಗಳ ಸಮ್ಮುಖದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮುಖಂಡರ ಸಭೆ ಪ್ರತ್ಯೇಕವಾಗಿ ನಡೆಯುವ ಮೂಲಕ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಯಿತು.

ಮಧ್ಯಾಹ್ನ 3 ಗಂಟೆಗೆ ಕಾಂಗ್ರೆಸ್ ಕಚೇರಿಯಲ್ಲಿ ವಿಧಾನಸಭೆ ಪರಾಜಿತ ಅಭ್ಯರ್ಥಿ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಹೆಚ್.ಪಿ. ಶ್ರೀಧರ್‌ಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್ ಮತ್ತು ಹಳ್ಳಿಮೈಸೂರು ಬ್ಲಾಕ್ ಅಧ್ಯಕ್ಷ ರಾಜೇಗೌಡ ಇತರೆ ಮುಖಂಡರುಗಳ ನೇತೃತ್ವದಲ್ಲಿ ವಿಧಾನ ಸಭಾ ವ್ಯಾಪ್ತಿಯ ಬೂತ್ ಮುಖಂಡರು, ಕಾರ್ಯಕರ್ತರ ಸಭೆ ನಡೆಸಲು ಉಸ್ತುವಾರಿಗಳ ಆಗಮನಕ್ಕೆ ಕಾದು ಕುಳಿತಿದ್ದರು.

ಆದರೆ ಜಿಲ್ಲಾ ಉಸ್ತುವಾರಿ ಎನ್. ಸಂಪಂಗಿ ಮತ್ತು ವಿಧಾನಸಭಾ ಉಸ್ತುವಾರಿ ಸಾಹಿದ್ ತೆಕ್ಕಲ್ ಅವರು ಒಂದು ಗಂಟೆ ಮುಂಚಿತವಾಗಿ ಪಟ್ಟಣದ ಪ್ರವಾಸಿ ಮಂದಿರಕ್ಕೆ ಆಗಮಿಸಿ ಮತ್ತೊರ್ವ ಬಂಡಾಯ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಎಂ.ಟಿ. ಕೃಷ್ಣೇಗೌಡ ಮತ್ತು ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪ್ರಸನ್ನಕುಮಾರ್ ನೇತೃತ್ವದಲ್ಲಿ ಸಭೆಯನ್ನು ನಡೆಸಲಾಯಿತು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಪ್ರದೀಪ್ ಕುಮಾರ್, ಸದಸ್ಯ ಅನಿಕೇತನ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ರತ್ನಮ್ಮ ಅವರ ಪತಿ ಕಳ್ಳಿಮುದ್ದನಹಳ್ಳಿ ಲೋಕೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ದೇವರಾಜೇಗೌಡ ಭಾಗವಹಿಸಿದ್ದರು.

## ನಾಯಕರ ವಿರುದ್ಧ ಕೆಂಡಾಮಂಡಲ

ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಅಧಿಕೃತವಾಗಿ ಸಭೆಯನ್ನು ಆಯೋಜನೆ ಮಾಡಲಾಗಿದೆ. ಅದಕ್ಕಾಗಿ ದೂರದ ಊರುಗಳಿಂದ ನೂರಾರು ಮಂದಿ ಮುಖಂಡರು, ಕಾರ್ಯಕರ್ತರು ಕಾಯುತ್ತ ಕುಳಿತಿದ್ದಾರೆ. ಆದರೆ ಉಸ್ತುವಾರಿಗಳು ಪಕ್ಷದ ಕಚೇರಿಗೆ ಸಭೆ ನಡೆಸದೇ ಖಾಸಗಿ ವ್ಯಕ್ತಿಗಳೊಂದಿಗೆ ಸಭೆ ನಡೆಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಉಸ್ತುವಾರಿಗಳಾದ ಸಂಪಂಗಿ, ಸಾಹಿದ್ ತೆಕ್ಕಲ್ ಅವರ ವಿರುದ್ಧ ಕೆಂಡಾಮಂಡಲರಾದರು.

## ಸಭೆಗೆ ಬಾರದ ಶ್ರೀಧರ್‌ಗೌಡ

ಎರಡು ಗಂಟೆಗಳ ಕಾಲ ಸಭೆಗೆ ತಡವಾಗಿ ಆಗಮಿಸಿದ ಉಸ್ತುವಾರಿಗಳ ನಡೆಯನ್ನು ಖಂಡಿಸಿ ಶ್ರೀಧರ್‌ಗೌಡ, ಮುಖಂಡರು, ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸದೇ ಹೊರಗುಳಿದು ಖಂಡಿಸಿದರು. ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್, ಉಸ್ತುವಾರಿಗಳಾದ ಎನ್. ಸಂಪಂಗಿ, ಸಾಹಿದ್ ತೆಕ್ಕಲ್ ಅವರು ಸಭೆ ಆರಂಭಿಸುವ ಕುರಿತು ಅರ್ಧಗಂಟೆ ಕಾಲ ಕುಳಿತರು ಕೂಡ ಶ್ರೀಧರ್‌ಗೌಡ ಸೇರಿ ಯಾವುದೇ ಮುಖಂಡರು, ಕಾರ್ಯಕರ್ತರು ಸಭೆಗೆ ಬಾರದೆ ಹೊರಗುಳಿದರು. ಬಳಿಕ ಶ್ರೀಧರ್‌ಗೌಡ ಮಾತ್ರ ಆಗಮಿಸಿ ಉಸ್ತುವಾರಿಗಳ ಬಳಿ ತಮ್ಮ ನೋವನ್ನು ಹೊರಹಾಕಿದ ವೇಳೆ ಉಸ್ತುವಾರಿ ಎನ್.ಸಂಪಂಗಿ ಅವರು ಹೊರ ನಡೆಯಲು ಯತ್ನಿಸಿದರು.

ಕಾಂಗ್ರೆಸ್ ಪಕ್ಷದ ಕೃಷ್ಣೇಗೌಡ ಅಥವಾ ಯಾರೇ ಆಗಿರಲಿ ಪಕ್ಷದ ಕಚೇರಿಗೆ ಬಂದು ಸಭೆಯಲ್ಲಿ ಭಾಗವಹಿಸಿ ಪಕ್ಷ ನಿಷ್ಠೆಯನ್ನು ತೋರಿಸಬೇಕು. ತಮಗೆ ಬೇಕಾದ ರೀತಿಯಲ್ಲಿ ಉಸ್ತುವಾರಿಗಳನ್ನು ಕರೆಯಿಸಿಕೊಂಡು ಸಭೆ ನಡೆಸುವುದು ಎಷ್ಟರಮಟ್ಟಿಗೆ ಸರಿ. ಇದು ಪಕ್ಷ ವಿರೋಧಿ ಹಾಗು ಪಕ್ಷ ನಿಷ್ಠೆಯಲ್ಲ. ಇದನ್ನು ನಾವು ಖಂಡಿಸುತ್ತೇವೆ ಎಂದು ಸಭೆಯಲ್ಲಿದ್ದ ಕಾರ್ಯಕರ್ತರು ಏರುಧ್ವನಿಯಲ್ಲಿ ಉಸ್ತುವಾರಿಗಳ ಎದುರು ಆಕ್ರೋಶ ವ್ಯಕ್ತಪಡಿಸಿದರು.

# ಬೆಳಮೆ ಪಿಕೆಪಿಎಸ್‌ಗೆ ಅವಿರೋಧ ಆಯ್ಕೆ



ಆಲೂರು: ತಾಲ್ಲೂಕಿನ ಬೆಳಮೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಅಧ್ಯಕ್ಷರಾಗಿ ಆರ್.ಎಸ್. ನಟರಾಜ್ ಹಾಗೂ ಉಪಾಧ್ಯಕ್ಷರಾಗಿ ರೇವೇಗೌಡ ಅವಿರೋಧ ಆಯ್ಕೆಯಾದರು.

ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆರ್.ಎಸ್. ನಟರಾಜ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರೇವೇಗೌಡ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಕುಮಾರ್ ಘೋಷಿಸಿದರು.

ನೂತನ ಅಧ್ಯಕ್ಷ ಆರ್.ಎಸ್. ನಟರಾಜ್ ಮಾತನಾಡಿ, ಸಹಕಾರಿ ಸಂಘವನ್ನು ನಮ್ಮ ಹಿರಿಯರು ಬಹಳ ಕಷ್ಟಪಟ್ಟು ಕಟ್ಟಿ ಬೆಳೆಸಿದ್ದಾರೆ. ಎಲ್ಲರ ಸಹಕಾರ ಪಡೆದು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರಿಗೆ ಹಾಸನ ಜಿಲ್ಲಾ ಹೆಚ್.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಕಬ್ಬಿನಹಳ್ಳಿ ಜಗದೀಶ್ ಸನ್ಮಾನಿಸಿ ಅಭಿನಂದಿಸಿದರು.

ಸಂಘದ ನಿರ್ದೇಶಕರಾದ ರೇವೇಗೌಡ, ಹೆಚ್.ಎಂ. ಕುಮಾರ್, ಸಿ.ಇ. ಯಶ್ವಂತ್ ಕುಮಾರ್, ಎಂ.ಎಂ. ದಿಲೀಪ್, ಎಸ್.ಕೆ. ಮಹೇಶ್, ವಿ.ಡಿ. ಇಂದಿರಾ, ಹೆಚ್.ಬಿ. ರತ್ನ, ಕೆ.ಎಂ. ಪಾಲಾಕ್ಷ, ಎಂ.ಎನ್. ಯುವರಾಜ್, ದರ್ಶನ್ ಕೆರೆಹಳ್ಳಿ ಉಪಸ್ಥಿತರಿದ್ದರು.

ಹಾಸನ: ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಎಂ.ಟೆಕ್ ವಿದ್ಯಾರ್ಥಿ ಬಿ.ಜೆ. ರಾಜೇಶ್ ಅವರಿಗೆ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್‌ಗಳ ಒಕ್ಕೂಟದ ಮೈಸೂರು ವಿಭಾಗದಿಂದ ಅತ್ಯುತ್ತಮ ಎಂ.ಟೆಕ್ ಮಹಾಪ್ರಬಂಧ ಬಹುಮಾನ ದೊರೆತಿದೆ. ಸಹಪ್ರಾಧ್ಯಾಪಕ ಡಾ. ಕೆ.ಸಿ.ಮನು ಹಾಗು ಡಾ. ಎಸ್. ಸುಂದರ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಅಪ್ಯಾರಾಮೆಟ್ರಿಕ್ ಸ್ಟಡೀಸ್ ಆನ್ ಫ್ಯಾಕ್ಟರ್ಸ್ ಅಫೆಕ್ಟಿಂಗ್ ಸ್ಟ್ರೆಂಥ್ ಅಂಡ್ ಡ್ಯೂರಬಿಲಿಟಿ ಇನ್ ಜಿಯೋಪಾಲಿಮರ್ ಕಾಂಕ್ರೀಟ್ ವಿಷಯ ಕುರಿತು ಪ್ರಬಂಧ ಮಂಡಿಸಿದ್ದರು.




# ಅರ್ಬನ್ ಬ್ಯಾಂಕ್‌ಗೆ ನಿರ್ದೇಶಕರ ಆಯ್ಕೆ



ಬೇಲೂರು: ಪಟ್ಟಣದ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ನ 13 ನಿರ್ದೇಶಕರ ಆಯ್ಕೆಗೆ ಇತ್ತೀಚೆಗೆ ಚುನಾವಣೆ ನಡೆಯಿತು.

2600 ಷೇರುದಾರರನ್ನು ಹೊಂದಿರುವ ಅರ್ಬನ್ ಬ್ಯಾಂಕ್ ವರ್ಷದಲ್ಲಿ 70 ಕೋಟಿ ರೂ. ವಹಿವಾಟು ನಡೆಸುತ್ತದೆ. ಕೃಷಿ, ವ್ಯಾಪಾರ, ಮನೆ ನಿರ್ಮಾಣ, ಸಣ್ಣ-ಪುಟ್ಟ ವ್ಯಾಪಾರಕ್ಕೆ 10 ಕೋಟಿ ರೂ. ಸಾಲ ಸೌಲಭ್ಯ ನೀಡಿದೆ. ವಿಶೇಷವಾಗಿ ಬೇಲೂರು ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ 16 ಕೋಟಿ ರೂ. ಠೇವಣಿ ಸಂಗ್ರಹಿಸುವ ಮೂಲಕ ಜನರ ವಿಶ್ವಾಸವನ್ನು ಗಳಿಸಿಕೊಂಡಿದೆ. ಪ್ರವಾಸಿ ತಾಣ ಬೇಲೂರು ಪಟ್ಟಣದ ಹಳೆಯ ಅಂಚೆ ಕಚೇರಿ ರಸ್ತೆಯ ಬಾಡಿಗೆ ಕಟ್ಟಡದಲ್ಲಿ ಬ್ಯಾಂಕ್ ನಡೆಸಲಾಗುತ್ತಿದ್ದು, 13 ಸದಸ್ಯರ ಬಲವನ್ನು ಹೊಂದಿರುವ ಇಲ್ಲಿನ ಅರ್ಬನ್ ಬ್ಯಾಂಕ್‌ನ 2025 ರಿಂದ 2030ರ ತನಕ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆಯಲ್ಲಿ ಒಟ್ಟು 22 ಮಂದಿ ಸ್ಪರ್ಧೆ ಮಾಡಿದ್ದು, ಅಂತಿಮವಾಗಿ ಮತದಾರರು 13 ಜನರಿಗೆ ಆರ್ಶಿವಾದ ಮಾಡಿದ್ದಾರೆ.

ಬಳ್ಳೂರು ಸಗನೇಗೌಡ ಅವಿರೋಧ ಆಯ್ಕೆಯಾಗಿದ್ದಾರೆ. ಎಸ್. ರವಿ, ಕೆ.ವಿ. ಬಲರಾಮೇಗೌಡ, ಬಿ.ಎಂ. ಪ್ರಸನ್ನ, ಬಿ.ಎನ್. ಚಂದ್ರಶೇಖರ್, ಎಂ.ಪಿ. ತಾರಾನಾಥ್, ಬಿ.ವಿ. ಸತೀಶ್, ಬಿ.ಬಿ. ಶಿವರಾಜ್, ಎಸ್.ಕೆ. ನಾಗೇಶ್, ಬಿ.ಎಸ್. ಶೀಲಾ, ಕೆ.ಟಿ. ರಶ್ಮಿತಾ, ಬಿ.ಎಲ್. ಲಕ್ಷ್ಮಣ್ ವಿಜಯಕುಮಾರ್ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಲೀಲಾ ಘೋಷಣೆ ಮಾಡಿದ್ದಾರೆ.

# ಬಾಗೆ ಗ್ರಾ.ಪಂ. ಅವ್ಯವಹಾರ ತನಿಖೆಗೆ ಮೀನಾ ಮೇಷ

## ವರದಿ ಸಲ್ಲಿಕೆಯಾಗಿ ತಿಂಗಳಾದರೂ ಕ್ರಮವಿಲ್ಲ | ಕೋಟ್ಯಂತರ ರೂ. ಪಂಗನಾಮ




ಸಕಲೇಶಪುರ: ತಾಲ್ಲೂಕಿನ ಬಾಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಿನ್ನಸ್ವಾಮಿ ವಿರುದ್ಧ ಭ್ರಷ್ಟಾಚಾರ ಆರೋಪ ಸಾಬೀತಾಗಿ ತಿಂಗಳುಗಳೇ ಕಳೆದರು ಜಿಲ್ಲಾ ಪಂಚಾಯಿತಿ ಮೇಲಧಿಕಾರಿಗಳು ಯಾವ ಕ್ರಮ ಕೈಗೊಳ್ಳದೆ ಭ್ರಷ್ಟರ ರಕ್ಷಣೆಗೆ ನಿಂತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

2019ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ 56 ಲಕ್ಷಕ್ಕೂ ಹೆಚ್ಚು ಹಣ ದುರ್ಬಳಕೆಯಾಗಿದ್ದರೆ, 11 ಲಕ್ಷ ರೂ. ತೆರಿಗೆ ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಅಭಿವೃದ್ಧಿ ಕಾಮಗಾರಿಗೆ ಬಿಡುಗಡೆಯಾಗಿದ್ದ 15 ಲಕ್ಷ ರೂ. ಸೇರಿ ಇನ್ನು ಹತ್ತು ಹಲವು ಅವ್ಯವಹಾರ ದಾಖಲೆ ಸಮೇತ ಸಾಬೀತಾಗಿದೆ. ಈ ಸಂಬಂಧ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯಿತಿಗೆ ವರದಿ ಸಲ್ಲಿಸಿದ್ದರೂ ಕ್ರಮ ಜರುಗಿಸದೆ ಇರುವುದು ಅಧಿಕಾರಿಗಳ ಮೇಲೆ ಸಂಶಯ ಹುಟ್ಟುವಂತೆ ಮಾಡಿದೆ.

ಬಾಗೆ ಗ್ರಾಮ ಪಂಚಾಯಿತಿಯಲ್ಲಿ 1 ಕೋಟಿ ರೂ.ಗು ಹೆಚ್ಚು ಭ್ರಷ್ಟಚಾರ ನಡೆದಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿದ್ದ ಮೊಣಪ್ಪ, ಪರಮೇಶಯ್ಯ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಚಿನ್ನಸ್ವಾಮಿ ಅವರ ಆಡಳಿತಾವಧಿಯಲ್ಲೇ ಅಕ್ರಮ ನಡೆದಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ. 2023ರ ಜೂನ್‌ನಲ್ಲಿ ಪಂಚಾಯಿತಿ ಸದಸ್ಯರೊಬ್ಬರು ನೀಡಿದ ದೂರು ಆಧರಿಸಿ ಮೇಲಧಿಕಾರಿಗಳ ಸೂಚನೆಯಂತೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ತನಿಖೆ ನಡೆಸಿದ್ದರು. ಅದೇ ವರ್ಷ ನವೆಂಬರ್‌ನಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ತನಿಖಾ ವರದಿ ಸಲ್ಲಿಸಿದ್ದರು. ವಿಶೇಷ ಲೆಕ್ಕತಪಾಸಣಾಧಿಕಾರಿ ಸಹ ಭ್ರಷ್ಟಾಚಾರ ನಡೆದಿರುವುದನ್ನು ದೃಢಪಡಿಸಿದ್ದರು.

ಲೆಕ್ಕತಪಾಸಣಾಧಿಕಾರಿ ವರದಿ ಕೈ ಸೇರಿದ ಬಳಿಕ ಜಿ.ಪಂ. ಮುಖ್ಯಕಾರ್ಯನಿರ್ವಹಣಾಧಿಕಾರಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿದ್ದರು.

ಪ್ರಕರಣ ಸಂಬಂಧ ಮತ್ತೊಮ್ಮೆ ತನಿಖೆ ನಡೆಸುವಂತೆ ತಾ.ಪಂ.ಗೆ ಸೂಚಿಸಿದ್ದರು. ಆಗ ಅಧಿಕಾರಿಗಳು, ನಿವೃತ್ತ ಪಿಡಿಓಗಳಾದ ಮೊಣ್ಣಪ್ಪ ಹಾಗೂ ಪರಮೇಶಯ್ಯ ಎಂಬ ಅಧಿಕಾರಿಗಳ ಸೇವಾ ಭತ್ಯೆ ತಡೆ ಹಿಡಿದು ವಿಚಾರಣೆಗೆ ಒಳಪಡಿಸಬೇಕು. ಹಾಲಿ ಕರ್ತವ್ಯದಲ್ಲಿರುವ ಚಿನ್ನಸ್ವಾಮಿ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂಬ ವರದಿಯನ್ನು 2025ರ ಫೆ. 15ರಂದು ನೀಡಿದ್ದಾರೆ. ವರದಿ ಸಲ್ಲಿಕೆಯಾಗಿ ಒಂದು ತಿಂಗಳು ಕಳೆದರೂ ಯಾವ ಕ್ರಮ ಜರುಗಿಸದೆ ಇರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಸಕಲೇಶಪುರ ತಾ.ಪಂ. ಇಒ ಗಂಗಾಧರ್ ಪ್ರತಿಕ್ರಿಯಿಸಿ, ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಅವ್ಯವಹಾರದ ಕುರಿತು ಮೇಲಧಿಕಾರಿಗಳ ನಿರ್ದೇಶನದಂತೆ ಎರಡು ಬಾರಿ ತನಿಖೆ ನಡೆಸಿ ವರದಿ ಸಲ್ಲಿಸಲಾಗಿದೆ. ಮುಂದಿನ ಕ್ರಮ ಅವರೇ ಕೈಗೊಳ್ಳಬೇಕು ಎಂದರು.

# ಬೆಳಕು ಮೂಡಿದಾಗ ಅರ್ಥಪೂರ್ಣ ಕಾದಂಬರಿ



ಹಾಸನ: ಲೇಖಕಿ ಕೆ.ಟಿ. ಸುವರ್ಣ ಶಿವಪ್ರಸಾದ್ ಅವರ ಬೆಳಕು ಮೂಡಿದಾಗ ಕೃತಿ ಹೆಣ್ಣಿನ ತುಡಿತವನ್ನು ಅರ್ಥಪೂರ್ಣವಾಗಿ ತೆರೆದಿಡುತ್ತದೆ ಎಂದು ಉಪನ್ಯಾಸಕಿ ಮೋಹನ್ ಕುಮಾರಿ ಹೇಳಿದರು.

ನಗರದ ಹಾಸನಾಂಬ ಥಿಯೋಸಫಿಕಲ್ ಸೊಸೈಟಿಯಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಜಿಲ್ಲಾ ಲೇಖಕಿಯರ ಬಳಗದ ಮಾರ್ಚ್ ತಿಂಗಳ ತಿರುಳು ಕಾರ್ಯಕ್ರಮದಲ್ಲಿ ಕೃತಿ ಕುರಿತು ಮಾತನಾಡಿ, ಇದು ಸೋದ್ದಿಶ್ಯ ಕಥೆ. ವ್ಯಷ್ಟಿ ಸಮಷ್ಟಿ ಪ್ರಭುತ್ವ ಮೌಲ್ಯ ವ್ಯವಸ್ಥೆ ಎಲ್ಲವೂ ಬದಲಾಗಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸುವ ವಸ್ತು ಈ ಕಾದಂಬರಿಯದು. ಕಥಾ ನಾಯಕಿ ಬಡಕುಟುಂಬದ ತಳ ಸಮುದಾಯದ ಕುಟುಂಬದ ಹೆಣ್ಣು ಮಗಳಾಗಿದ್ದು ಶಿಕ್ಷಣ ಪಡೆಯಲು ಅವಳು ಎದುರಿಸುವ ಕಷ್ಟ ಸವಾಲುಗಳನ್ನು ದಿಟ್ಟತನದಿಂದ ಎದುರಿಸುತ್ತಾ ಹೋಗುತ್ತಾಳೆ.

ಶಿಕ್ಷಣವು ಹೆಣ್ಣಿನ ಮಟ್ಟಿಗೆ ಯಾಕೆ ನಿರ್ಣಾಯಕ ಎನ್ನುವುದನ್ನು ಈ ಕಾದಂಬರಿ ಉತ್ಸಾಹ ಮತ್ತು ಕೆಲವೊಮ್ಮೆ ಮುಗ್ಧತೆ ಎಂದು ಭಾಸವಾಗುವ ಸರಳತೆಯಲ್ಲಿ ಉದ್ದಕ್ಕೂ ಹೇಳುತ್ತಾ ಹೋಗುತ್ತದೆ. ಆದಿ ಮತ್ತು ಅಂತ್ಯ ಎರಡನ್ನೂ ತೀರ್ಮಾನಿಸಿಕೊಂಡು ಹೊರಟ ಈ ಸೂತ್ರಬದ್ಧ ಕಾದಂಬರಿಯು ತಾನೇ ನಿರ್ಧರಿಸಿಕೊಂಡಿರುವ ಕೇಂದ್ರದ ಕಡೆಗೆ ಚಲಿಸುತ್ತಾ ಹೋಗುತ್ತದೆ. ಶಿಕ್ಷಣ ಸಾಮಾಜಿಕ ಮತ್ತು ರಾಜಕೀಯ ಪಾತ್ರಗಳು ಮಾತ್ರ. ಈ ಸಮುದಾಯದ ಕಟ್ಟಡವನ್ನು ಹೊಸದಾಗಿ ನಿರ್ಮಿಸಬಲ್ಲವು ಎನ್ನುವ ಸತ್ಯವನ್ನು ಈ ಕೃತಿ ತಿಳಿಸುತ್ತದೆ. ಕಥಾ ನಾಯಕಿ ವ್ಯಕ್ತಿಗತವಾಗಿ ಆಕೆಯ ಸಂಗಾತಿಯ ಆಯ್ಕೆಯ ವಿಷಯದಲ್ಲಿ ಎದುರಾಗುವ ದ್ವಂದ್ವಗಳು ಸಹಜವಾಗಿವೆ. ಸಾಹಿತ್ಯದ ಜವಾಬ್ದಾರಿ ಅರಿತು ಸಾಧ್ಯತೆಗಳನ್ನು ಅದರ ಎತ್ತರ ಬಿತ್ತರದಲ್ಲಿ ನೋಡುತ್ತಲೇ ಅದು ಎಲ್ಲರನ್ನೂ ತನ್ನ ತೆಕ್ಕೆಗೆ ಸೆಳೆದುಕೊಳ್ಳುವ ಪರಿಯೂ ನಿಗೂಢವೇ ಆಗಿದೆ. ಒಟ್ಟಿನಲ್ಲಿ ಈ ಕಾದಂಬರಿ ಹೆಣ್ಣು ಶಿಕ್ಷಣ ಪಡೆದರೆ ಸಮಾಜ ಮತ್ತು ಸಮುದಾಯವನ್ನು ಹೇಗೆ ಅಭಿವೃದ್ಧಿಯತ್ತ ಕೊಂಡೊಯ್ಯಬಲ್ಲಳು ಎಂಬುದನ್ನು ಕೃತಿಕಾರರು ಬೆಳಕು ಮೂಡಿದಾಗ ಕಾದಂಬರಿಯಲ್ಲಿ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ ಎಂದರು.

ಲೇಖಕಿ ಸುವರ್ಣ ಕೆ.ಟಿ.ಶಿವಪ್ರಸಾದ್ ಮಾತನಾಡಿ, ಬರಹಗಾರರು ತಮ್ಮ ಬರವಣಿಗೆಯಲ್ಲಿ ಮನುಷ್ಯ ಪ್ರಜ್ಞೆ ಪರಿಸರ ಪ್ರಜ್ಞೆ ಮತ್ತು ಕನ್ನಡ ಪ್ರಜ್ಞೆಯನ್ನು ರೂಢಿಸಿಕೊಳ್ಳಬೇಕು. ಇಂದು ಸಾಹಿತ್ಯ ಲೋಕದಲ್ಲಿ ವಿಮರ್ಶೆ ಸತ್ತು ಹೋಗಿದೆ. ಎಲ್ಲಿಯವರೆಗೆ ವಿಮರ್ಶೆ ನೇರ ನಿಷ್ಠುರವಾಗುವುದಿಲ್ಲವೋ ಅಲ್ಲಿಯವರೆಗೆ ಬರವಣಿಗೆ ಗಟ್ಟಿಯಾಗಿರುವುದಿಲ್ಲ ಎಂದು ಹೇಳಿದರು.

ಲೇಖಕಿ ಕೆ.ಟಿ.ಜಯಶ್ರೀ ಮಾತನಾಡಿ, ಸಮಾಜದಲ್ಲಿ ನಡೆಯುತ್ತಿರುವ ಮಹಿಳಾ ದೌರ್ಜನ್ಯಗಳ ಕುರಿತು ಉದಾಹರಣೆ ಸಹಿತ ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ರಾಜೇಶ್ವರಿ ಹುಲ್ಲೇನಹಳ್ಳಿ ಮಾತನಾಡಿ, ಶೋಷಣೆಗೊಳಪಟ್ಟ ಹೆಣ್ಣು ಮಕ್ಕಳು ಅಪರಾಧಿಗೆ ಕಾನೂನು ಶಿಕ್ಷೆಯನ್ನು ಕೊಡದಿದ್ದಾಗ ಆತ್ಮಹತ್ಯೆ ಮಾಡಿಕೊಂಡ ಬಹಳಷ್ಟು ಘಟನೆಗಳು ಇವೆ. ವಿದೇಶಿ ಸಂಸ್ಕೃತಿಯ ಅನುಕರಣೆಯಿಂದಾಗಿ ವಿವಾಹ ವಿಚ್ಛೇದನ, ನಮ್ಮ ಸಮಾಜದಲ್ಲಿ ಹೆಚ್ಚು ಕಾಣಿಸುತ್ತಿದೆ. ನಮ್ಮ ಸಂಸ್ಕಾರಗಳಿಂದ ಅದಲು ಬದಲಾಗಿವೆ. ಹೆಣ್ಣು ಮಕ್ಕಳು ಗಟ್ಟಿಯಾಗಿದ್ದರೆ ಯಾರು ಏನೂ ಮಾಡಲಾಗುವುದಿಲ್ಲ, ಸೀತೆಯನ್ನು ರಾವಣ ಕರೆದುಕೊಂಡು ಹೋದರೂ ಅವಳನ್ನೇನು ಮಾಡಲಾಗಲಿಲ್ಲ, ಹೆಣ್ಣುಮಕ್ಕಳ ಮನೋಬಲ ಗಟ್ಟಿಯಾಗಿದ್ದಾಗ ಸಮಾಜ ಸ್ವಸ್ತವಾಗಿರಬಹುದು ಎಂದು ತಿಳಿಸಿದರು.

# ಕನ್ನಡ ಚಿತ್ರರಂಗದ ಮೇರು ನಟ ಪುನೀತ್



ಚನ್ನರಾಯಪಟ್ಟಣ: ಡಾ. ಪುನಿತ್ ರಾಜ್‌ಕುಮಾರ್ ಕನ್ನಡ ಚಿತ್ರರಂಗ ಕಂಡ ಮೇರು ನಟ. ಅವರ ಸಿನಿಮಾಗಳು ಜನರಿಗೆ ಪ್ರೇರಣೆಯಾಗುವಂತಹದು, ಪೃಥ್ವಿ ಚಿತ್ರ ಎಷ್ಟೋ ಅಧಿಕಾರಿಗಳಿಗೆ ಪ್ರೇರಣೆಯಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಆರ್. ಯತೀಶ್ ಕುಮಾರ್ ತಿಳಿಸಿದರು. ಪಟ್ಟಣದ ಡಾ. ಪುನಿತ್‌ರಾಜ್‌ಕುಮಾರ್ ಉದ್ಯಾನವನದಲ್ಲಿ ಪುನಿತ್ ಅವರ 50ನೇ ಹುಟ್ಟುಹಬ್ಬದ ಅಂಗವಾಗಿ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘ ಹಾಗೂ ಡಾ. ಪುನಿತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪುನಿತ್ ಕೇವಲ ನಟರಾಗಿರಲಿಲ್ಲ ಅವರೊಬ್ಬ ಮಾದರಿ ಪುರುಷ ಅವರ ವ್ಯಕ್ತಿತ್ವ ದೊಡ್ಡದು ಅವರ ಸರಳತೆ, ಮುಗ್ದತೆ ಎಲ್ಲರನ್ನು ನಾಚಿಸುವಂತಿತ್ತು.

ಹಾಸನ ಜಿಲ್ಲೆಯಲ್ಲೇ ಪುನಿತ್ ರಾಜ್‌ಕುಮಾರ್‌ರವರ ಉದ್ಯಾನವನ ನಮ್ಮ ತಾಲ್ಲೂಕಿನಲ್ಲಿದ್ದು ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ ಮೊದಲಿನಿಂದಲೂ ಉತ್ತಮ ಕೆಲಸಗಳನ್ನು ಮಾಡಿಕೊಂಡು ಬರುತ್ತಿರುವುದು ತಾಲೂಕಿನ ಜನತೆಗೆ ಗೊತ್ತಿರುವ ವಿಚಾರ ಆದ್ದರಿಂದ ಈ ಉದ್ಯಾನವನಕ್ಕೆ ಬೇಕಿರು ಹೆಚ್ಚು ಮೂಲಭೂತ ಸೌಕರ್ಯಗಳನ್ನು ಅಳವಡಿಸಿ ಮಕ್ಕಳಿಗೆ ಆಟವಾಡಲು ಕ್ರೀಡಾ ಸಾಮಗ್ರಿಗಳನ್ನು ಅಳವಡಿಸಲಾಗುವುದು ಎಂದರು.

ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಪುಟ್ಟಣ್ಣಗೋಕಾಕ್ ಮಾತನಾಡಿ, ಪುನಿತ್‌ಅವರು ಇನ್ನು ಹೆಚ್ಚುಕಾಲ ಬದುಕಿದ್ದರೆ ಕನ್ನಡ ಚಿತ್ರರಂಗ ಎನ್ನು ಎತ್ತರಕ್ಕೆ ಬೆಳೆಯುತ್ತಿತ್ತು, ಪುನಿತ್ ಕೇವಲ ಕರ್ನಾಟಕ್ಕೆ ಸೀಮಿತವಲ್ಲ ನಾವು ಪ್ರವಾಸಕ್ಕೆ ಹೋದ ಸಂದರ್ಭದಲ್ಲಿ ಪಂಜಾಬ್‌ನ ಆಟೋ ಸಂಘ ಒಂದು ಪುನಿತ್‌ರಾಜ್ ಕುಮಾರ್ ಆಟೋ ಸಂಘ ಎಂಬ ಹೆಸರು ನೋಡಿ ಆಶ್ಚರ್ಯವಾಯಿತು, ನೇಪಾಳ ಪ್ರವಾಸದಲ್ಲೂ ಕರ್ನಾಟಕದವರು ಎಂದರೆ ಪುನಿತ್ ರಾಜ್‌ಕುಮಾರ್ ಎಂದು ಹೇಳುವ ಜನರು ಈ ದೇಶದಲ್ಲಿದ್ದಾರೆ.

ಅಂತಹ ವ್ಯಕ್ತಿಯನ್ನು ಕಳಕೊಂಡ ನಾವು ಅವರ ಸ್ಥಾನವನ್ನು ಯಾರೂ ಕೂಡ ತುಂಬಲಾಗದು ಹಾಗೂ ಡಾ.ರಾಜ್ ಕುಮಾರ್ ಅವರ ವ್ಯಕ್ತಿತ್ವಕ್ಕಿಂತ ಬಿನ್ನವಾಗಿ ಬೆಳೆದು ಅವರ ಹೆಸರನ್ನೇ ಅಜರಾಮರವಾಗಿ ಉಳಿಸಿ ಹೋದ ವ್ಯಕ್ತಿ ಎಂದರು.

ಪುರಸಭಾ ಸದಸ್ಯರಾದ ಬನಶಂಕರಿರಘು ಹಾಗೂ ಗಣೇಶ್ ಮಾತನಾಡಿ ಪುನಿತ್‌ರವರ ವ್ಯಕ್ತಿತ್ವಕ್ಕೆ ನಮ್ಮ ಉದ್ಯಾನವನವೇ ಸಾಕ್ಷಿ ಈ ಉದ್ಯಾನವನವನ್ನು ಕಳೆದ ವರ್ಷ ರಾಜ್‌ಕುಮಾರ್‌ರವರ ಪುತ್ರಿ ಲಕ್ಷ್ಮಿ ಅಮ್ಮನವರು ಉದ್ಘಾಟನೆ ಮಾಡಿದ್ದರು ಆದರೆ ಪುರಸಭೆ ವತಿಯಿಂದ ಉತ್ತಮ ನಿರ್ವಹಣೆಯನ್ನು ಮಾಡಿಕೊಂಡು ಬಂದಿದ್ದು ಪಟ್ಟಣಕ್ಕೆ ಒಂದು ಆಕರ್ಷಣೆಯಾಗಿದ್ದು ಪುನಿತ್‌ಗೆ ಪುನಿತ್ ಅವರೇ ಸಾಟಿ ಅವರ ನಟನೆ ಬೇರೆ ಯಾರಿಗೂ ಸಾಧ್ಯವಿಲ್ಲ ಅವರ 50ನೇ ವರ್ಷದ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿರುವ ಸಂತೋಷದ ವಿಚಾರ ಎಂದರು.

ಪುರಸಭಾ ಸದಸ್ಯೆ ಕವಿತಾ ರಾಜಣ್ಣ, ರೈತ ಸಂಘದ ಅಧ್ಯಕ್ಷ ಸಿ.ಜಿ. ರವಿ, ಪ್ರೇಮಮ್ಮ, ರಾಮಣ್ಣ, ಡಾ.ರಾಜ್‌ಕುಮಾರ್ ಸಂಘದ ರೇವಣ್ಣ, ದಿನೇಶ್, ಮಹೇಶ್, ಪುರುಷೋತ್ತಮ್, ಗಿಡ್ಡೇಗೌಡ, ರಂಗಸ್ವಾಮಿ, ತೇಜಸ್, ರಾಮಚಂದ್ರು, ಜಗದೀಶ್ ಕೆರೆಬೀದಿ ಮತ್ತಿತರಿದ್ದರು.

# ಸಾಲ ತೀರಿಸಲಾಗದೆ ರೈತ ಸಾವು



ಹೊಳೆನರಸೀಪುರ: ತಾಲ್ಲೂಕಿನ ಹಳೆಕುಂಚೇವು ಗ್ರಾಮದಲ್ಲಿ ಸಾಲ ಪಾವತಿಗಾಗಿ ಬ್ಯಾಂಕ್‌ನಿಂದ ನೋಟಿಸ್ ಬಂದಿದ್ದಕ್ಕೆ ಮನನೊಂದ ರೈತ ನೇಣಿಗೆ ಶರಣಾಗಿದ್ದಾರೆ.

ಗ್ರಾಮದ ಹೆಚ್.ಜೆ. ರಂಗಸ್ವಾಮಿ (53) ಮೃತರು. 2007ರಲ್ಲಿ ಕರ್ನಾಟಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದರು. ಅಸಲು ಹಾಗೂ ಬಡ್ಡಿ ಸೇರಿ 5 ಲಕ್ಷ ರೂ. ಕಟ್ಟುವಂತೆ ಬ್ಯಾಂಕ್‌ನಿಂದ ನೋಟಿಸ್ ಜಾರಿಯಾಗಿತ್ತು. ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 50 ಸಾವಿರ ರೂ. ಸಾಲ ಮಾಡಿದ್ದರು. ನಿರೀಕ್ಷಿತ ಪ್ರಮಾಣದಲ್ಲಿ ಬೆಳೆ ಬಾರದ ಹಿನ್ನಲೆಯಲ್ಲಿ ಜಿಗುಪ್ಸೆಗೊಂಡಿದ್ದ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ.

ಸೋಮವಾರ ಮಧ್ಯಾಹ್ನ ತೋಟಕ್ಕೆ ಹೋಗಿ ಬರುವುದಾಗಿ ತೆರಳಿದ್ದ ಅವರು ತೋಟದ ಮನೆಯಲ್ಲೇ ನೇಣು ಬಿಗಿದುಕೊಂಡಿದ್ದಾರೆ. ಮೃತರಿಗೆ ಇಬ್ಬರು ಪುತ್ರಿಯರು, ಪುತ್ರ ಇದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕ್ಷುಲ್ಲಕ ಕಾರಣಕ್ಕೆ ಮಾರಣಾಂತಿಕ ಹಲ್ಲೆ

ಹಾಸನ: ನಗರದ ಬಸಟ್ಟಿಕೊಪ್ಪಲಿನಲ್ಲಿ ವೈಯಕ್ತಿಕ ದ್ವೇಷದಿಂದ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಸೋಮವಾರ ನಡೆದಿದೆ.

ಬಸಟ್ಟಿಕೊಪ್ಪಲಿನ ವಿದ್ಯಾಸಾಗರ್ ಅವರ ಮೇಲೆ ವೆಂಕಟರಾಮು, ದೇವಿರಮ್ಮ, ರಘು ಮತ್ತು ರೂಪಶ್ರೀ ಎಂಬುವವರು ಹಲ್ಲೆ ಮಾಡಿದ್ದಾರೆ.

ವಿದ್ಯಾಸಾಗರ್ ಅವರ ಮನೆ ಅಂಗಳದಲ್ಲಿ ಅಳವಡಿಸಿದ್ದ ತಗಡಿನ ಶೆಡ್ ತೆಗೆಯಲು ವೆಂಕಟರಾಮು ಹಾಗೂ ಇತರರು ಮುಂದಾದಾಗ ವಿದ್ಯಾಸಾಗರ್ ಪ್ರಶ್ನಿಸಿದ್ದಕ್ಕೆ ಕಣ್ಣಿಗೆ ಖಾರದ ಪುಡಿ ಎರಚಿ ಮಚ್ಚಿನಿಂದ ಹಲ್ಲೆ ನಡೆಸಿದ್ದಾರೆ. ದೇವಿರಮ್ಮ ಅವರು ಕಲ್ಲಿನಿಂದ ಹೊಡೆದು ಗಾಯಗೊಳಿಸಿದ್ದಾರೆ. ನಂತರ ನೀರಿನ ಪೈಪ್, ಬೈಕ್ ಜಖಂಗೊಳಿಸಿ ಮನೆಯ ಕಿಟಕಿಗಳನ್ನು ಒಡೆದು ಹಾಕಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜಿಲ್ಲೆಯ ಸ್ಕೌಟ್ಸ್-ಗೈಡ್ಸ್ ಮಕ್ಕಳಿಗೆ ರಾಜ್ಯ ಪುರಸ್ಕಾರ




ಹಾಸನ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜಭವನದಲ್ಲಿ ಹಮ್ಮಿಕೊಂಡಿದ್ದ 2024-25ನೇ ಸಾಲಿನ ರಾಜ್ಯ ಪುರಸ್ಕಾರ್ ಪ್ರಶಸ್ತಿಗೆ ಜಿಲ್ಲೆಯ ಮಕ್ಕಳು ಭಾಜನರಾಗಿದ್ದಾರೆ.

ಗೈಡ್ ವಿಭಾಗದಿಂದ ಹಾಸನದ ಸಂತ ಫಿಲೋಮಿನ ಆಂಗ್ಲ ಮಾಧ್ಯಮ ಶಾಲೆಯ ಸಾಹಿತ್ಯ ಕೆ. ಉಪ್ಪಾರ್, ಸ್ಕೌಟ್ ವಿಭಾಗದಿಂದ ಹಳೆಬೀಡಿನ ಎಸ್.ಜಿ.ಆರ್. ಪಬ್ಲಿಕ್ ಶಾಲೆಯ ಪುಷ್ಕರ್ ಎಂ. ರಾಜ್, ರೇಂಜರ್ ವಿಭಾಗದಿಂದ ಚನ್ನರಾಯಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಎ.ಎಸ್. ಸ್ವಾತಿ, ರೋವರ್ ವಿಭಾಗದಿಂದ ಹಾಸನದ ಸರ್ಕಾರಿ ವಿಜ್ಞಾನ ಕಾಲೇಜಿನ (ಸ್ವಾಯತ್ತ) ಹೆಚ್.ಬಿ. ಕಾರ್ತಿಕ್, ಕ್ಲಬ್ ವಿಭಾಗದಿಂದ ಹಾಸನದ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲೆಯ ಲಿಖಿತ್ ಎಸ್. ಗೌಡ, ಫ್ಲಾಕ್ ವಿಭಾಗದಿಂದ ಹಳೆಬೀಡಿನ ಎಸ್.ಜಿ.ಆರ್. ಪಬ್ಲಿಕ್ ಶಾಲೆಯ ಎಸ್. ಆರ್. ತಾರುಣ್ಯಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರಶಸ್ತಿ ಪ್ರದಾನ ಮಾಡಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ಹೆಚ್ಚುವರಿ ಮುಖ್ಯ ಆಯುಕ್ತ ಯು.ಟಿ. ಖಾದರ್, ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಇತರರಿದ್ದರು.

ಪ್ರಶಸ್ತಿ ಸ್ವೀಕೃತ ಮಕ್ಕಳಿಗೆ ಜಿಲ್ಲಾ ಮುಖ್ಯ ಆಯುಕ್ತ ಡಾ. ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ, ಜಿಲ್ಲಾ ಪದಾಧಿಕಾರಿಗಳಾದ ಜಯಾ ರಮೇಶ್, ಸ್ಟೀಫನ್ ಪ್ರಕಾಶ್, ಎಂ.ಬಿ. ಗಿರಿಜಾಂಬಿಕ, ರಮೇಶ್ ಅಭಿನಂದಿಸಿದ್ದಾರೆ.

# ಡೇರಿಗೆ ಹಾಲು ಹಾಕುವ ವಿಚಾರ: ದಂಪತಿ ಮೇಲೆ ಹಲ್ಲೆ

ಹಾಸನ: ತಾಲ್ಲೂಕಿನ ಎ.ಜಿ. ಕೊಪ್ಪಲು ಗ್ರಾಮದ ಹಾಲು ಉತ್ಪಾದಕರ ಸಂಘದ ಹಾಲು ಪರೀಕ್ಷಕ ಹಾಗೂ ಆತನ ಪತ್ನಿ ಹಾಲನ್ನು ಆರಿಸಿ ತರಬೇಕೆಂದು ಹೇಳಿದ್ದಕ್ಕೆ ಕಲ್ಲಿನಿಂದ ಹೊಡೆದು ಗಂಭೀರ ಗಾಯಗೊಳಿಸಿದ್ದಾರೆ.

ಡೇರಿ ಕಾರ್ಯದರ್ಶಿ ದ್ರಾಕ್ಷಾಯಿಣಿ ಹಾಗೂ ಪತಿ ಗೋಪಾಲ್ ಮೇಲೆ ಅದೇ ಗ್ರಾಮದ ಸೌಮ್ಯ ಮತ್ತು ಪ್ರದೀಪ್ ದಂಪತಿ ಹಲ್ಲೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಸೋಮವಾರ ಬೆಳಿಗ್ಗೆ ಡೇರಿಗೆ ಸೌಮ್ಯ ಹಾಲು ತಂದಿದ್ದಾಗ 25 ಡಿಗ್ರಿ ಬಂದಿರುವುದರಿಂದ ಹಾಲನ್ನು ಆರಿಸಿ ತರಬೇಕೆಂದು ಕಾರ್ಯದರ್ಶಿ ಹೇಳಿದ್ದಾರೆ. ಆಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಸಂಜೆ ಡೇರಿಗೆ ಬಂದ ಸೌಮ್ಯ ಹಾಗು ಪ್ರದೀಪ್ ಹಾಲು ಡಿಗ್ರಿ ಬರದಿದ್ದರೂ ಹಾಕಿಸಿಕೊಳ್ಳಬೇಕು ಎಂದು ಜಗಳ ಶುರುಮಾಡಿ ಗೋಪಾಲ್ ಹಾಗೂ ದ್ರಾಕ್ಷಾಯಿಣಿ ಮೇಲೆ ಕಲ್ಲಿನಿಂದ ಹೊಡೆದು ಗಂಭೀರ ಗಾಯಗೊಳಿಸಿದ್ದಾರೆ. ಗ್ರಾಮಸ್ಥರು ಜಗಳ ಬಿಡಿಸಿ ಸಮಾಧಾನಪಡಿಸಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬುಲೆಟ್ ಬೈಕ್ ಓಡಿಸಿದ ಅಪ್ರಾಪ್ತ ಮಾಲೀಕನಿಗೆ ಬಿತ್ತು ದಂಡ

ಹಾಸನ: ಅಪ್ರಾಪ್ತ ಬಾಲಕನ ಬುಲೆಟ್ ಬೈಕ್ ಚಲಾಯಿಸುವ ಕ್ರೇಜ್ ಚನ್ನರಾಯಪಟ್ಟಣದಲ್ಲಿ ಮಾಲೀಕನಿಗೆ ದುಬಾರಿಯಾಗಿ ಪರಿಣಮಿಸಿದೆ.

ಹೌದು, ಅಪ್ರಾಪ್ತ ಬಾಲಕನಿಗೆ ಬುಲೆಟ್ ಬೈಕ್ ಚಲಾಯಿಸಲು ನೀಡಿದ ತಪ್ಪಿಗೆ ಬೈಕ್ ಮಾಲೀಕನಿಗೆ ಚನ್ನರಾಯಪಟ್ಟಣದ ನ್ಯಾಯಾಲಯ ಮಂಗಳವಾರ 25 ಸಾವಿರ ರೂ. ದಂಡ ವಿಧಿಸಿದೆ. ಅಲ್ಲದೇ ಅಪ್ರಾಪ್ತರಿಗೆ ಬೈಕ್ ಚಲಾಯಿಸಲು ಅವಕಾಶ ನೀಡಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿ ಎಚ್ಚರಿಕೆ ನೀಡಿದೆ.

**ಘಟನೆ ವಿವರ :** ಚನ್ನರಾಯಪಟ್ಟಣದಲ್ಲಿ ಗಸ್ತಿನಲ್ಲಿದ್ದ ಪಿಎಸ್‌ಐ ಮಲ್ಲಪ್ಪ ನವೋದಯ ವೃತ್ತದಿಂದ ಕೆ.ಆರ್.ವೃತ್ತದ ಕಡೆಗೆ ಅಪ್ರಾಪ್ತನೊಬ್ಬ ಬುಲೆಟ್ ಬೈಕ್ ಚಲಾಯಿಸಿಕೊಂಡು ಬರುತ್ತಿರುವುದನ್ನು ಕಂಡು ಆತನನ್ನು ತಡೆದು ದಾಖಲೆಗಳ ತಪಾಸಣೆ ನಡೆಸಿದರು. ಆಗ ಬೈಕ್ ಹೊಳೆನರಸೀಪುರ ತಾಲ್ಲೂಕಿನ ಹುಲಿವಾಲ ಗ್ರಾಮದ ನಿಖಿತ್ ಎಂಬವರಿಗೆ ಸೇರಿದ್ದು, ಬೈಕ್ ಸವಾರ ಅಪ್ರಾಪ್ತ ಎನ್ನುವುದು ಕಂಡು ಬಂದಿತು. ಹೀಗಾಗಿ ಅವರು ಬೈಕ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿದರು. ವಿಷಯ ತಿಳಿದ ಬೈಕ್ ಮಾಲೀಕ ನ್ಯಾಯಾಲಯಕ್ಕೆ ಹಾಜರಾಗಿ ದಂಡಪಾವತಿಸಿದರು.

**ಲಿಪಿಕಾರರ ಯಡವಟ್ಟು:** ನ್ಯಾಯಾಲಯದಲ್ಲಿ ದಂಡ ಕಟ್ಟಿಸಿಕೊಂಡ ಸಿಬ್ಬಂದಿ ರಸೀದಿಯಲ್ಲಿ ದಿನಾಂಕ 19/03/2025 ಎಂದು ನಮೂದಿಸಿದ್ದಾರೆ. ರಸೀದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು ಚರ್ಚೆಗೆ ಗ್ರಾಸವಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248